ಕಷ್ಟ , ತಾಪತ್ರಯಗಳಿಗೆ ಸಿಕ್ಕಿ ಬೆಂದಿದ್ದೇನೆ. ಬಹಳ ಕಾಲದವರೆಗೆ ಸಂಸಾರದಲ್ಲಿ ಸಿಕ್ಕಿ ನರಳಿದ್ದೇನೆ. ಏನೇನನ್ನು ಅನುಭವಿಸಬೇಕೋ, ಎಲ್ಲವನ್ನೂ ಅನುಭವಿಸಿದ್ದೇನೆ. ಈಗ ನಾನು ಆತ್ಮಜ್ಞಾನವನ್ನು ಹೊಂದಿ ಆನಂದದಿಂದ ಇದ್ದೇನೆ. ಜನ್ಮಾಂತರಗಳಿಂದ ಕೂಡಿದ ಈ ಸಂಸಾರದಿಂದ ಬಿಡಿಸಿ ಕೊಂಡಿದ್ದೇನೆ. ತಂದೆ, ಬನ್ನಿ, ಹೋಗೋಣ. ಮಂದರ ಪರ್ವತದಲ್ಲಿ ಹಾಳುಬಿದ್ದಿರುವ ನನ್ನ ಪೂರ್ವಜನ್ಮದ ಶರೀರವನ್ನು ನೋಡಿ ಬರೋಣ.''


ಅನಂತರ ಮೂವರೂ ಮಂದರಪರ್ವತಕ್ಕೆ ಹೋದರು. ಭೃಗುವಿನ ಮಗನಾಗಿದ್ದ ತನ್ನ ಪೂರ್ವಜನ್ಮದ ದೇಹವು ಹಾಗೆಯೇ ಬಿದ್ದಿರುವುದನ್ನು ವಸುದೇವ ನೋಡಿದ. ಅವನು ತನ್ನ ತಂದೆಗೆ ಹೀಗೆ ಹೇಳಿದ: ''ಓ ತಂದೆ, ನೋಡು ಈ ದೇಹವನ್ನು! ಮೂಳೆಗಳ ಚಕ್ಕಳದಂತೆ ಕಾಣುತ್ತಿದೆ! ಅದೆಷ್ಟು ಬಗೆಯ ಭಕ್ಷ್ಯಭೋಜ್ಯಗಳಿಂದ ಈ ದೇಹವು ಪೋಷಿತವಾಗಿತ್ತು! ಇದನ್ನು ಸುಂದರವಾಗಿ ಇಡಲು ಅದೆಷ್ಟು ಗಂಧಚಂದನಗಳನ್ನು ಲೇಪಿಸಲಾಗಿತ್ತು! ಆದರೂ ಇದರ ಅವಸ್ಥೆ ಹೇಗಿದೆ ನೋಡು! ಮನಸ್ಸಿನ ಅವಸಾನವಾಗದ ಹೊರತು ಆತ್ಯಂತಿಕ ಆನಂದವನ್ನು ಪಡೆಯಲಾಗುವುದಿಲ್ಲ. ಬ್ರಹ್ಮಜ್ಞಾನ ಅಥವಾ ಆತ್ಮಜ್ಞಾನವನ್ನು ಪಡೆದಾಗ ಮಾತ್ರ ಆನಂದಸಾಗರದಲ್ಲಿ ನಿಮಗ್ನರಾಗಬಹುದು. ಆಗ ಸಂಸಾರದ ಎಲ್ಲ ರೀತಿಯ ಭೀಕರ ದುಃಖದಾರಿದ್ರ್ಯಗಳಿಂದ ಮುಕ್ತರಾಗಬಹುದು.''

ಆಗ ಯಮನು ಹೇಳಿದನು: ''ಓ ಶುಕ್ರ! ನೀನು ವಸುದೇವನ ಈ ದೇಹವನ್ನು ತ್ಯಜಿಸು. ರಾಜನು ಅರಮನೆಯನ್ನು ಪ್ರವೇಶಿಸುವಂತೆ ಈ ಹಳೆಯ ಮೃತದೇಹವನ್ನು ಪ್ರವೇಶಿಸು. ಈ ದೇಹದಲ್ಲಿ ಇದ್ದುಕೊಂಡೇ ಅಸುರರ ಗುರುವಾಗಿ ಅವರಿಗೆ ಸರಿಯಾದ ಮಾರ್ಗದರ್ಶನವನ್ನು ಮಾಡು.''

ಅದರಂತೆಯೇ ಶುಕ್ರನು ವಸುದೇವನ ದೇಹವನ್ನು ತ್ಯಜಿಸಿದನು. ಯಮದೇವನ ಆದೇಶದಂತೆ ತನ್ನ ಹಿಂದಿನ ದೇಹವನ್ನು ಪ್ರವೇಶಿಸಿದನು. ಮಳೆಗಾಲದಲ್ಲಿ ಬರಡು ನದಿಯಲ್ಲಿಯೂ ನೀರು ಹರಿದು ಜೀವಂತಿಕೆ ಎದ್ದು ಕಾಣುತ್ತದೆ. ಅದರಂತೆ ಆ ದೇಹದಲ್ಲಿ ಜೀವವು ಪ್ರವೇಶಿಸಿದಾಗ, ನರನಾಡಿಗಳಲ್ಲಿ ರಕ್ತವು ಹರಿದು, ಜೀವಂತಿಕೆಯಿಂದ ಕಂಗೊಳಿಸಿತು. ಮಾಂಸಮಜ್ಜೆಗಳು ಪ್ರಾಣಶಕ್ತಿಯಿಂದ ಶಕ್ತಿಸಂಪನ್ನವಾದವು. ಪ್ರಾಣವು ನಿರಾಯಾಸವಾಗಿ ದೇಹದ ತುಂಬ ಹರಿಯಲು ಆರಂಭಿಸಿತು.

ತನ್ನ ಮಗನ ಮೃತದೇಹದಲ್ಲಿ ಪ್ರಾಣವು ಮರುಕಳಿಸಿದ್ದನ್ನು ಕಂಡ ಭೃಗುವು ತನ್ನ ಕಮಂಡಲುವಿನಿಂದ ಮಂತ್ರಪೂರಿತ ಜಲವನ್ನು ಪ್ರೋಕ್ಷಿಸಿ ಅದನ್ನು ಶುದ್ಧಿಗೊಳಿಸಿದನು. ಶುಕ್ರನು ನೆಲದಿಂದ ಮೇಲೆದ್ದು ತನ್ನ ತಂದೆಗೆ ನಮಸ್ಕರಿಸಿದನು. ತಂದೆಯು ತನ್ನ ಪುತ್ರನನ್ನು ಅಪ್ಪಿಕೊಂಡು, ಪ್ರೀತಿಯ ಕಣ್ಣೀರನ್ನು ಹರಿಸಿದನು. ಇಬ್ಬರೂ ಈ ಮಿಲನದಿಂದ ಸಂತೋಷಹೊಂದಿದರು. ಮಗ ಮತ್ತು ತಂದೆ – ಇಬ್ಬರೂ ಈ ಜೀವನ್ಮುಕ್ತಾವಸ್ಥೆಯಲ್ಲಿ ದಿನಗಳನ್ನು ಕಳೆದರು. ಕಾಲಕ್ರಮೇಣ ಶುಕ್ರನು ಅಸುರರ ಆಚಾರ್ಯನಾದನು. ಭೃಗುವು ಮಾನವರಲ್ಲಿ ಸರ್ವಶ್ರೇಷ್ಠ ಗುರುವಾಗಿಯೇ ಜೀವಿಸಿದ್ದನು. ✴

## ಯುವಚೇತನ



**ಬಾ**ಲ್ಯಾರಭ್ಯದಿಂದ ಮನುಷ್ಯರಿಗೆ ಅವರು ಪಾಪಿಗಳೆಂದೂ, ಅಬಲರೆಂದೂ ಬೋಧಿಸಲಾಗಿದೆ. ಅವರೆಲ್ಲರೂ ಮಹಾಮಹಿಮರಾದ ಅಮೃತಾತ್ಮನ ಮಕ್ಕಳೆಂಬುದನ್ನು ಬೋಧಿಸಿ. ಯಾರು ಅತ್ಯಂತ ದುರ್ಬಲರಾಗಿರುವರೋ ಅವರಿಗೂ ಕೂಡ ಹೀಗೆ ಹೇಳಿ. ಅವರಿಗೆ ನೆರವಾಗುವಂತಹ ಸ್ಪಷ್ಟವಾದ, ಬಲಯುತವಾದ ಭಾವನೆಗಳು ಬಾಲ್ಯಾರಭ್ಯ ಅವರ ಮೆದುಳಿಗೆ ಸೇರಲಿ. ಈ ಭಾವನೆಯ ಪ್ರಭಾವಕ್ಕೆ ಅವರು ಒಳಗಾಗಲಿ. ನಮ್ಮನ್ನು ದುರ್ಬಲರನ್ನಾಗಿ ಮಾಡುವ, ಅಂಜುವಂತೆ ಮಾಡುವ ಆಲೋಚನೆಗಳಿಗೆ ಆಸ್ಪದ ಕೊಡಬೇಡಿ. ನಿಮ್ಮ ಮನಸ್ಸಿಗೇ, ''ಶಿವೋऽಹಂ'' ಎಂದು ಹೇಳಿ. ಮರಣ ಕಾಲದಲ್ಲಿ ಕೂಡ ''ನಾನೆ ಅವನು'' ಎಂದು ಸಾರಿ. ಅದೇ ಸತ್ಯ . ಪ್ರಪಂಚದ ಅನಂತ ಶಕ್ತಿಯ ಆಗರ ನಿಮ್ಮಲ್ಲಿದೆ.

**ನಾ**ವು ಪವಿತ್ರಾತ್ಮರೆಂದು ಹೇಳಿಕೊಳ್ಳುವುದು ಮತ್ತು ಇತರರಿಗೂ ಈ ಅಭಿಪ್ರಾಯವನ್ನು ಬೋಧಿಸುವುದು, ಇದೊಂದೇ ನಾವು ಗುರಿಯನ್ನು ಮುಟ್ಟಬೇಕಾದರೆ ಇರುವ ಏಕೈಕ ಮಾರ್ಗ. ನಾವು ಇದನ್ನು ಮನನ ಮಾಡುತ್ತಿದ್ದರೆ ಶಕ್ತಿ ಬರುವುದು. ನಮ್ಮ ಧ್ವನಿ ಶಕ್ತಿಪೂರಿತವಾಗುತ್ತಾ ಬರುವುದು. ಕೊನೆಗೆ ನಮ್ಮ ಹೃದಯವನ್ನು ತನ್ನ ವಶಕ್ಕೆ ತೆಗೆದುಕೊಳ್ಳುವುದು. ಅದು ನಮ್ಮ ನಾಡಿಯಲ್ಲಿ ಸಂಚರಿಸುವುದು, ದೇಹದಲ್ಲೆಲ್ಲಾ ಹಾಸು–ಹೊಕ್ಕಾಗುವುದು.

**ಯಾ**ವ ಶಕ್ತಿ ಸಮಾಧಾನಗಳನ್ನು ನೀನು ಆಶಿಸುತ್ತಿರುವೆಯೋ ಅವೆಲ್ಲಾ ಆಗಲೇ ನಿನ್ನಲ್ಲಿವೆ. ಆದಕಾರಣ ನಿನ್ನ ಭವಿಷ್ಯವನ್ನು ನೀನೇ ರೂಪಿಸಿಕೊ. ಆದದ್ದು ಆಯಿತು, ಅನಂತ ಭವಿಷ್ಯ ನಿನ್ನ ಮುಂದಿದೆ. ನೀನು ಮಾಡುವ ಪ್ರತಿಯೊಂದು ಆಲೋಚನೆ, ಕೆಲಸ, ಆಡಿದ ಮಾತು ಕೂಡ ಮನಸ್ಸಿನಲ್ಲಿ ತನ್ನ ಪರಿಣಾಮವನ್ನು ಬೀರುವುದು ಎಂಬುದನ್ನು ಸದಾ ನೆನಪಿನಲ್ಲಿಡು. ಕೆಟ್ಟ ಆಲೋಚನೆ ಮತ್ತು ಕೆಟ್ಟ ಕೆಲಸಗಳ ದುಷ್ಪರಿಣಾಮ ನಿನ್ನ ಮೇಲೆ ವ್ಯಾಘ್ರದಂತೆ ನೆಗೆಯಲು ಸಿದ್ಧವಾಗಿದ್ದರೆ, ನೀನು ಮಾಡಿದ ಒಳ್ಳೆಯ ಆಲೋಚನೆ ಮತ್ತು ಒಳ್ಳೆಯ ಕೆಲಸಗಳ ಪರಿಣಾಮ, ಲಕ್ಷಾಂತರ ದೇವಗಣಗಳ ಶಕ್ತಿಸಮೂಹದೊಂದಿಗೆ ನಿನ್ನನ್ನು ರಕ್ಷಿಸಲು ಎಂದೆಂದೂ ಕಾಯುತ್ತಿದೆ.